# ಅಲ್ಲಮನ ವಚನಗಳಲ್ಲಿ ಮನಃಶಾಸ್ತ್ರ

ಅಮರ ಯರಗಟ್ಟಿಕರ[1] & ಗಜಾನನ ನಾಯ್ಕ[2]

[1]ಸಂಶೋಧನಾ ವಿದ್ಯಾರ್ಥಿ, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

[2]ಸಹ ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

DOI: https://doi.org/10.5281/zenodo.17297572

## ABSTRACT:

೧೨ನೆಯ ಶತಮಾನ ವಚನ ಸಾಹಿತ್ಯದ ಪರ್ವ. ಇಂತಹದೊಂದು ವಚನ ಪರ್ವ ಮಂದಿರಕ್ಕೆ ಕಳಶವಾದವನು ಅಲ್ಲಮನೆಂದರೆ ತಪ್ಪಾಗಲಾರದು. ಅಲ್ಲಮ ಎಂದರೆ ಮನಸ್ಸು ಎಂಬುದು ಔಚಿತ್ಯವಾಗಿದೆ. ಏಕೆಂದರೆ ಅಲ್ಲಮ ಅಷ್ಟು ಸುಲಭವಾಗಿ ಎಲ್ಲರ ಕೈಗೆ ಸಿಗುವವನಲ್ಲ. ಆತನ ಪ್ರತಿಯೊಂದು ವಚನವು ಕೂಡ ಮನಃಶಾಸ್ತ್ರದ ಹಿನ್ನೆಲೆಯಲ್ಲಿರುವುದು ಪ್ರಸ್ತುತ ಲೇಖನದ ತಿರುಳಾಗಿದೆ.

## KEYWORDS:

ಭಾವ, ಅನುಭಾವ, ಮನಃಶಾಸ್ತ್ರ, ಭಗವದ್ಗೀತೆ, ಪಾರ್ವತಿ, ಶಿವ, ಗುಹೇಶ್ವರಾ, ಓಂಕಾರ.

ಅಲ್ಲಮನ ಜೀವನದಲ್ಲಾದ ಮುಖ್ಯ ಎರಡು ಘಟನೆಗಳು ಒಂದು ಇತ ಮದ್ದಳೆ ನುಡಿಸುವಾಗ ಇತನ ಮನ ಕದಿಯಲು ಬಂದ ಮಾಯೆ, ಇನ್ನೇನು ಅಲ್ಲಮ ಪಡೆಯಬೇಕು ಎನ್ನುವಷ್ಟರಲ್ಲಿ ಅವಳು ಇಲ್ಲವಾದದ್ದು, ಇನ್ನೊಂದು ಗುಹೆಯಲ್ಲಾದ ಅನಿಮಿಷನ ಸ್ಪರ್ಶವಾಗಿ ಮಾಯವಾದದ್ದು. ಈ ಎರಡು ಘಟನೆಗಳು ಅಲ್ಲಮನ ಮನೋ ಚಿಂತನೆಗೆ ದಾರಿಕೊಟ್ಟಿತು. ಹೀಗಾಗಿ ವಾಚಕರಿಗೆ ಅಲ್ಲಮನ ಪ್ರತಿಯೊಂದು ವಚನವು ಅಧ್ಯಹಾರ.

**ಅಕಾರ, ಉಕಾರ, ಮಕಾರ ಮರ್ಮಸ್ಥಾನದ**
**ತ್ರಿಕೂಟಸ್ಥಾನದ ಸಮರಸದ ಸುಖದಲ್ಲಿ ಬೆಳೆದ ಕಂದ ಮೂಲಾದಿಗಳ**
**ಹೊಸ ರಸದ ಅಮೃತವನು ಓಸರಿಸಿ**
**ದಣಿಯುಂಡ ತೃಪ್ತಿಯಿಂದ ಸುಖಿಯಾದೆ ಗುಹೇಶ್ವರಾ.** (೧)

ಅಲ್ಲಮನೇ ಹೇಳುವ ಹಾಗೆ "ಕಾಯಕವೇ ಪೀಠ, ಮನಸ್ಸೇ ಲಿಂಗ" ಎಂದು ಹೇಳುತ್ತಾನೆ. ಕಾಯ ಪೀಠದ ಆಂತರಿಕದಲ್ಲಾಗುವ ಆಧ್ಯಾತ್ಮದ ಅರಿವನ್ನು ವಚನದಲ್ಲಿ ವಿವೇಚಿಸಬಹುದು. ಅಕಾರ, ಉಕಾರ, ಮಕಾರ ಇದನ್ನೇ ನಾವು ಓಂಕಾರ ತ್ರಿಕೂಟ ಸ್ಥಾನ ಎಂದು ಕರೆಯುತ್ತೇವೆ. ಓಂಕಾರದ ನಾದ ಕಂಪನ ಅದು ಮುಂದೆ ಧ್ಯಾನಾವಸ್ಥೆಯಲ್ಲಿ ಹೋಗಿ ನಾಭಿ ಮಂಡಲದಲ್ಲಿ ಜೀವ ಊರ್ಧ್ವಮೂಲವಾಗಿ ಮೇಲೆ ಹರಿಯುತ್ತದೆ. ಭಗವದ್ಗೀತೆಯ ಹದಿನೈದನೆಯ ಅಧ್ಯಾಯದಲ್ಲಿ

**"ಊರ್ಧ್ವಮೂಲಮಧಃಶಾಖಮ್ ಅಶ್ವತ್ಥಂ ಪ್ರಾಹುರವ್ಯಯಮ್।"** (೨)

ಅಶ್ವತ್ಥ ಗಿಡದ ಹಾಗೆ ಸೂಕ್ಷ್ಮವಾಗಿ ಊರ್ಧ್ವಮೂಲ ಹರಿದು ಹೃದಯಕ್ಕೆ ಬಂದು ನಿಂತು ಅಲ್ಲಿಂದ ಮತ್ತೆ ಗಂಟಲಿನ ಮುಖಾಂತರ ಹರಿದು ಮಸ್ತಕ ಎರಡು ಭಾಗವಾಗಿ ಪ್ರಾಣ ನಿರ್ಗಮನವಾಗುವ ಅನುಭವ ಇದನ್ನೇ ಆಧ್ಯಾತ್ಮದಲ್ಲಿ 'ಬೆಪೋಹ್ಯಶಿರ್ಷಕಪಾಲೆ' ಎಂದು

ಕರೆಯುವುದುಂಟು. ಹೀಗೆ ಶಿರೋವಸ್ಥೆಯಲ್ಲಿ ಆತ್ಮ ಮಿಲನದ ಸಂತೃಪ್ತಿ ಮತ್ತು ದೇಹವಿದ್ದಾಗಲೇ ಸಾಯುವ ಅನುಭವ ಇದು ಸಾಧನಾ ಪಥದಲ್ಲಿ ಇದೆ. ಅದಕ್ಕೆ ಅಲ್ಲಮ ಹೇಳುತ್ತಾನೆ ಹೊಸ ರಸದ ಅಮೃತದ ತೃಪ್ತಿಯಿಂದ ಸುಖಿಯಾದೆ ಗುಹೇಶ್ವರ ಎಂದು ಹೇಳುತ್ತಾನೆ.

ಅನುಭವವೇ ಪ್ರಮಾಣ ಎಂದು ಮಧ್ವಾಚಾರ್ಯರು ಹೇಳಿದ್ದುಂಟು. ಹಾಗೆಯೇ ಅಲ್ಲಮನ ಪ್ರತಿಯೊಂದು ವಚನವು ಆತ್ಮ ಸ್ವರೂಪ ದರ್ಶನದ ಕೊರತೆ ಇರುವುದನ್ನು ಕಾಣುತ್ತೇವೆ. ಅಲ್ಲಮ ಕಾಯದ ಸುತ್ತ-ಮುತ್ತ, ಕಾಯದ ಆಂತರಿಕ-ಬಾಹ್ಯ, ಕಾಯದ ನಕಾಶೆಯಾಂತದಲ್ಲಾದ ಭಾವದ ಅನುಭವವೇ ವಾಚಕರಿಗೆ ಪ್ರತಿಬಿಂಬವಾಗುತ್ತದೆ. ಅಕ್ಕ ಒಂದು ಕಡೆಗೆ ಹೇಳುವ ಹಾಗೆ ‘‘ದುಂಬಿ ಪರಿಮಳವೇ ಕಂಡು ಸಿಕ್ಕು ಸಿಗದೆ ದಿಟಕನಂತೆ ಇರುನವ್ವಾ’’ ಹಾಗೆ ಅಲ್ಲಮನ ವಚನ ಓದಿದಾಗಾಗುವ ಅನುಭವ ಮರು ಓದಿನಲ್ಲಿ ಇರುವುದಿಲ್ಲ. ಪ್ರತಿ ಓದಿಗೂ ಅಲ್ಲಮನ ಮನಃಶಾಸ್ತ್ರ ಹಿಡಿಯಲು ಯಾರಿಂದಲೂ ಸಾಧ್ಯವಿಲ್ಲ ಅನಿಸುತ್ತದೆ. ಅಲ್ಲಮ ತನ್ನ ವಚನ ವಾಙ್ಮಯದಲ್ಲಿ ಮನಸ್ಸಿನ ಸ್ವರೂಪ ಅದರ ಕ್ರಿಯೆ ಕುರಿತು ಸ್ಪಷ್ಟಪಡಿಸುತ್ತಾನೆ.

**ಅಂಗದ ಮನೆಯ ಮೇಲೊಂದು ಕೋತಿ ಇದೆ**
**ಈ ಕೋತಿ ಕೈಯನಿತ್ತೋಡೆ ಮೈಯ ನುಂಗುವುದು**
**ಮೈಯನೆ ಕರದೋಡೆ ಸುಮ್ಮನೆ ನಿಲ್ಲುವುದು**
**ಮೈಯಾಂತೋಡೆ ಬಯಲಾಗುವುದು ಗುಹೇಶ್ವರಾ**

ಅಲ್ಲಮ ಕಾಯದ ಮುಖ್ಯ ಯಂತ್ರವೇ ಮನಸ್ಸು ಎಂಬುದು ಗ್ರಾಹ್ಯ. ಅಂಗದ ಮೇಲೆ ಕೋತಿ ಇದೆ, ಆ ಕೋತಿ ಹೇಳಿದ ಹಾಗೆ ಮಾಡಿದರೆ ಅದು ನಿಮ್ಮನ್ನೇ ನುಂಗುವುದು. ಸಾರಥಿ ರಥ ಓಡಿಸುವಾಗ ಕುದುರೆಗೆ ಲಗಾಮು ಹಾಕಿದಾಗ ಮಾತ್ರ ಅದು ಏಕೋಚಿತ್ತದಿಂದ ಸಾಗುತ್ತದೆ. ಮನಸ್ಸು, ಪ್ರಜ್ಞೆ ಇಂತಹ ಪರಿಕಲ್ಪನೆ ಕಠೋಪನಿಷತ್ತಿನಲ್ಲಿ ಗಮನಿಸಬಹುದು.

**ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು ಚ।**
**ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ॥ (೩)**

ಆತ್ಮ ಎಂಬುದಕ್ಕೆ ಈ ಶರೀರವೇ ರಥ. ಈ ರಥ ದಾರಿ ತಪ್ಪದೇ ಸರಿದಾರಿಗೆ ಸಾಗಬೇಕಾದರೆ, ಗುರಿ ತಲುಪಬೇಕಾದರೆ ಅದಕ್ಕೆ ಒಬ್ಬ ಸಾರಥಿ ಅವಶ್ಯಕತೆ ಅದೇ ಬುದ್ಧಿ, ಪ್ರಜ್ಞೆ, ಮನಸ್ಸು. ಯಾವುದು ತಪ್ಪು, ಯಾವುದು ಸರಿ ಎಂದು ಹೇಳುವ ವಿವೇಕ ಪ್ರಜ್ಞೆಯೇ ಸಾರಥಿ ಅದೇ ಬುದ್ಧಿ. ಹೀಗಾಗಿ ಅಲ್ಲಮ ಕೂಡ ಮನಸ್ಸಿನ ಕುರಿತು ಅದ್ಭುತವಾಗಿ ಮೇಲೆ ಹೇಳಿರುವ ವಚನದ ಉಪಮೇ, ರೂಪಕ ಈ ಮೇಲೆ ಕೊಟ್ಟಿರುವುದನ್ನು ಗಮನಿಸಬಹುದು.

ಹೀಗೆ ಅಲ್ಲಮ ಮನಸ್ಸು ಹಾಗೂ ಮನಸ್ಸಿನ ಕಡಿವಾಣದಿಂದ ನಿಯಂತ್ರಣ ಮುಂದೆ ಅಧ್ಯಾತ್ಮ ಪಥದತ್ತ ಒಯ್ಯುವ ಮತ್ತು ಮನಸ್ಸಿನಿಂದಲೇ ಎಲ್ಲ ಪಂಚೇಂದ್ರಿಯಗಳು ಹತೋಟಿಗೆ ತರುವುದಕ್ಕೆ ಮನಸ್ಸಿನ ಪಾತ್ರ ಎಷ್ಟು ಮುಖ್ಯ ಎಂಬುದು ಹೇಳುತ್ತಾ ಹೋಗುತ್ತಾನೆ. ಹಾಗೆ ಅರಿವಿನ ಮತ್ತು ಬುದ್ಧಿಯ ಕುರಿತೇ ಅಲ್ಲಮನ ಅನೇಕ ವಚನಗಳನ್ನು ಯಾವ ಯಾವ ರೀತಿ ಪರಿಕಲ್ಪನೆ ಕೊಡುತ್ತಾನೆ ಎಂಬುವುದು ನಾವು ಗಮನಿಸಬಹುದು.

**‘ನ’ ಎಂಬುದು ನಂದಿಯಾಗಿ , ‘ಮ’ ಎಂಬುದು ಮಹತ್ತಾಗಿ**
**‘ಶಿ’ ಎಂಬುದು ರುದ್ರನಾಗಿ, ‘ವಾ’ ಎಂಬುದೆ ಹಂಸೆಯಾಗಿ**
**‘ಯ’ ಎಂಬುದೆ ಅರಿವಾಗಿ, ಓಂಕಾರವೇ ಗುರುವಾಗಿ,**
**ಸಂಬಂಧವೇ ಅಸಂಬಂಧವಾಗಿ, ಅಸಂಬಂಧವೇ ಸಂಬಂಧವಾಗಿ**
**ಎರಡೊಂದಾಗಿ, ಗುಹೇಶ್ವರ ಲಿಂಗದಲ್ಲಿ ಸಂಬಂಧಿ. (೪)**

ಅಲ್ಲಮ ಹೇಳುತ್ತಾನೆ 'ನ' ಎಂಬುದು ನಂದಿಯಾಗಿ, 'ಮ' ಎಂಬುದೇ ಬುದ್ಧಿಯಾಗಿ, 'ಶಿ' ಎಂಬುದೇ ರುದ್ರನಾಗಿ, 'ವಾ' ಎಂಬುದೇ ಹಂಸೆಯಾಗಿ, 'ಯ' ಎಂಬುದೇ ಅರಿವು ಎಂದು ಹೇಳುತ್ತಾನೆ. ಇದಕ್ಕೆಲ್ಲ ಗುರು 'ಓಂಕಾರ' ಎಂದು ಹೇಳುತ್ತಾನೆ. ಸೂಕ್ಷ್ಮವಾಗಿ ಗಮನಿಸಿದಾಗ ಅಲ್ಲಮ ಹೇಳುವ ಹಾಗೆ 'ನಮಃಶಿವಾಯ' ಎಂಬುವುದು ಭಗವಂತನ ನಾಮ. ಮೇಲು ನೋಟಕ್ಕೆ ಶಿವನ ನಾಮ ಕುರಿತು ತಿಳಿಯುವುದು. ಆದರೆ ಅಲ್ಲಮ ಈ ವಚನದಲ್ಲಿ ಭಾರತೀಯ ತತ್ತ್ವಶಾಸ್ತ್ರದ ಕುರಿತು ಅದ್ಭುತವಾಗಿ ವಿಶ್ಲೇಷಿಸಿದ್ದಾನೆ. ಹೀಗಾಗಿ ಭಾರತೀಯ ತತ್ತ್ವಶಾಸ್ತ್ರ ಹಾಗೂ ಶಾಸ್ತ್ರಕಾರರು ಶಿವ ಅನ್ನುವ ಪರಿಕಲ್ಪನೆ ಏನು? ಅನ್ನುವುದು ಅಲ್ಲಮನ ವಚನದಲ್ಲಿ ನಾವು ಕಾಣಬಹುದು. ಶಾಸ್ತ್ರಕಾರರ ಪ್ರಕಾರ ಶಿವ ಅನ್ನುವುದು ಮನಸ್ಸು, ಬುದ್ಧಿ, ಮಹತ್ ಎಂದು ಹೇಳಿದ್ದುಂಟು. ಶಾಸ್ತ್ರಕಾರರ ಪ್ರಕಾರ ಪಾರ್ವತಿ ಎಂದರೆ ಸರಸ್ವತಿ, ವಾಗ್ದೇವಿ, ಮಾತು. ಶಿವ ಮತ್ತು ಪಾರ್ವತಿ ಎಂದರೆ ಮನಸ್ಸು ಹೇಗೆ ಹೇಳುತ್ತದೆಯೋ ಹಾಗೆ ಮಾತು ಕೇಳುತ್ತದೆ. ಅದಕ್ಕಾಗಿ ಶಾಸ್ತ್ರಕಾರರು ಮತ್ತು ಭಾರತೀಯ ತತ್ತ್ವಶಾಸ್ತ್ರದ ಪ್ರಕಾರ ಶಿವ ಮತ್ತು ಪಾರ್ವತಿಯನ್ನು ಅರ್ಧಾಂಗಿನಿ ಎಂದು ಕರೆಯುವುದುಂಟು. ನಾವು ಸಾಮಾನ್ಯವಾಗಿ ದಾಂಪತ್ಯ ಜೀವನದಲ್ಲಿ ಕೂಡ ಗಂಡ-ಹೆಂಡತಿಯನ್ನು ಅರ್ಧಾಂಗಿನಿ ಎಂದು ಸರ್ವೆಸಾಮಾನ್ಯವಾಗಿ ಕರೆಯುವ ವಾಡಿಕೆ. ಅರ್ಧಾಂಗಿನಿ ಎಂಬುವ ಪರಿಕಲ್ಪನೆ ಹೀಗೆ ಬಂದಿದೆ. ಇದರ ಕುರಿತು ಪಂಡಿತ್ ಬನ್ನಂಜೆ ಗೋವಿಂದಾಚಾರ್ಯರು ಅನೇಕ ಅವರ ಪುಸ್ತಕಗಳಲ್ಲಿ ಮತ್ತು ಉಪನ್ಯಾಸಗಳಲ್ಲಿ ಹೇಳಿದ್ದಾರೆ. ಹೀಗೆ ಅಲ್ಲಮ ಅರಿವು ಎಂಬುವುದು ಹಂಸೆಯಾಗಿ ಅರಿವಿನ ಸೂಕ್ಷ್ಮತೆ ಹಂಸೆಗೆ, 'ತೂಲ'(ಹತ್ತಿ) ಗೆ ಹೋಲಿಸಿದ್ದು ಗಮನಿಸಬೇಕು. ಅಲ್ಲಮನ ಪ್ರಕಾರ ಕೂಡ ಶಿವ ಎಂಬುದು ಅರಿವು, ಪ್ರಜ್ಞೆ, ವಿವೇಕ, ಮನಸ್ಸು ಎಂದು ಹೇಳಿದ್ದುಂಟು. ಇದಕ್ಕಿಂತ ಅಲ್ಲಮ ಅರಿವು ಎಂದರೆ ಎಷ್ಟು ಅದ್ಭುತವಾಗಿ ಮತ್ತೊಂದು ವಚನದಲ್ಲಿ ಹೇಳಿದ್ದಾನೆ.

**ಶಬ್ದವೆಂಬೆನೆ ಶ್ರೋತ್ರದೆಂಜಲು, ಸ್ಪರ್ಶವೆಂಬೆನೆ ತ್ವಕ್ಕಿನೆಂಜಲು**
**ರೂಪೆಂಬೆನೆ ನೇತ್ರದೆಂಜಲು, ರುಚಿಯೆಂಬೆನೆ ಜಿಹ್ವೆಯೆಂಜಲು**
**ಪರಿಮಳವೆಂಬೆನೆ ಘ್ರಾಣದೆಂಜಲು, ನಾನೆಂಬೆನೆ ಅರಿವಿನೆಂಜಲು**
**ಎಂಜಲೆಂಬ ಭಿನ್ನವಳಿದ ಬೆಳಗಿನೊಳಗಣ ಬೆಳಗು ಗುಹೇಶ್ವರ ಲಿಂಗವು (೫)**

ಅರಿವು ಎಂಬುದಕ್ಕೆ ಅಲ್ಲಮನ ಮತ್ತೊಂದು ನಿದರ್ಶನ ಗಮನಿಸಿ. ಶಬ್ದ ಎಂಬುವುದು ಕಿವಿ ಎಂಜಲು, ಸ್ಪರ್ಶ ಎಂಬುವುದು ಚರ್ಮದೆಂಜಲು, ರೂಪ, ದೃಷ್ಟಾಂತ ಎಂಬುದು ಕಣ್ಣುಗಳೆಂಜಲು, ರುಚಿ ಎಂಬುದು ನಾಲಿಗೆಯ ಎಂಜಲು, ಪರಿಮಳ ಎಂಬುವುದು ಮೂಗಿನ ಎಂಜಲು ಆದರೆ 'ನಾ' ಎಂಬುದೇ ಅರಿವು, ಅರಿವು ಎಂಬುದೇ 'ನಾ' ಇದನ್ನು ತಿಳಿದವನು ಬೆಳಗಿನೊಳಗೆ ಬೆಳಗು, ತನ್ನರಿವವು ಕಾಣಾ ಗುಹೇಶ್ವರ ಎಂದು ಅದ್ಭುತವಾಗಿ ಅರಿವಿನ ಮಹತ್ವ ಎಷ್ಟು ಎಂಬುದು ತನ್ನ ವಚನ ವಾಙ್ಮಯದಲ್ಲಿ ಅರಿವು, ಮನಸ್ಸಿನ ಸೂಕ್ಷ್ಮತೆ ಅದು ಕಾಣಲು ಅಲ್ಲಮನಿಂದಲೇ ಸಾಧ್ಯ. ಹೀಗಾಗಿ ಅರಿವಿನಿಂದಲೇ ಇಂದ್ರಿಯ ಸೌಂದರ್ಯ, ಕಲ್ಪನೆಯ ಸೌಂದರ್ಯ, ಆತ್ಮದ ಒಂದು ಸೌಂದರ್ಯ ಈ ಮನಸ್ಸು, ಅರಿವುಗಳಿಂದ ಅರಿಯಲು ಸಾಧ್ಯ.

ಅಲ್ಲಮ ಅರಿವು, ಮನಸ್ಸು, ವಿವೇಕ, ಪ್ರಜ್ಞೆ, ಜಾಗೃತಿ ಕುರಿತು ಈ ಮೇಲೆ ಹೇಳಿರುವ ವಚನಗಳಷ್ಟೇ ಅಲ್ಲ. ಅಲ್ಲಮನ ವಚನಗಳು ಓದುವಾಗ ಪ್ರತಿಯೊಂದು ವಚನವೂ ಕೂಡ ಅಲ್ಲಮ ವಾಚಕರ ಮನಸ್ಸಿನ ಜೊತೆಗೆ ತರ್ಕ ನಡೆಸುತ್ತಾನೆ. ಇಂತಹ ಅನೇಕ ನಿದರ್ಶನಗಳು ಅಲ್ಲಮನ ವಚನಗಳಲ್ಲಿ ಇವೆ. ಅದಕ್ಕೆ ಅಲ್ಲಮನೆಂದರೆ ಎಲ್ಲವನ್ನು ತ್ಯಾಗ ಮಾಡಿದವ, ಅಲ್ಲಮನೆಂದರೆ ವೈರಾಗ್ಯ, ಅಲ್ಲಮನೆಂದರೆ ಅರಿವು, ಅಲ್ಲಮನೆಂದರೆ ಮನಸ್ಸು, ಅಲ್ಲಮನೆಂದರೆ

ವಿವೇಕ, ಅಲ್ಲಮನೆಂದರೆ ಪ್ರಜ್ಞೆ, ಅಲ್ಲಮನೆಂದರೆ ಜಿಜ್ಞಾಸೆ, ಅಲ್ಲಮನೆಂದರೆ ಕೊನೆಗೆ ತಾ ಬಯಲು ಎಂಬುದು ಸ್ಪಷ್ಟ.

ಅಲ್ಲಮನ ಕುರಿತು ಸಾಕಷ್ಟು ಸಂಶೋಧನಾ ಮಹಾಪ್ರಬಂಧಗಳು, ಸಂಶೋಧನಾ ಲೇಖನಗಳು, ವಿಮರ್ಶೆಗಳು, ವಿಚಾರ ಸಂಕೀರ್ಣಗಳು ಬಂದಿರುವವೇ ಅಲ್ಲಮನನ್ನು ಹಿಡಿಯುವುದು ತುಂಬಾ ಕಷ್ಟಕರ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಅನೇಕ ಶ್ರೋತೃಗಳು ಸಮುದ್ರದೊಳಗಿಳಿದು ಉಪ್ಪು ತೆಗೆಯಲು ಪ್ರಯತ್ನ ಮಾಡುತ್ತಾರೆ ವಿನಃ, ಸಮುದ್ರದಾಳಕ್ಕಿಳಿದು ಮುತ್ತು-ರತ್ನಗಳು ತೆಗೆಯುವುದು ಅದು ಕೆಲವರಿಂದ ಮಾತ್ರ ಸಾಧ್ಯ ಉಂಟು.

**ಅಡಿ ಟಿಪ್ಪಣಿಗಳು:**

1. ಬಸವರಾಜು ಎಲ್., ಅಲ್ಲಮ ವಚನ ಚಂದ್ರಿಕೆ, ಸಂಪಾದಕರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ ರೋಡ, ಬೆಂಗಳೂರು -೫೬೦೦೦೨, ಪುಟ-೫೭
2. ಗೋವಿಂದಾಚಾರ್ಯ ಬನ್ನಂಜೆ ಭಗವದ್ಗೀತೆ, ಅಧ್ಯಾಯ-೧೫, ೧ನೆಯ ಶ್ಲೋಕ, ಜಾಲತಾಣ ಕೃಪೆ
3. ಗೋವಿಂದಾಚಾರ್ಯ ಬನ್ನಂಜೆ ., ಕಠೋಪನಿಷತ್ ಉಪನಿಷತ್ ಪ್ರವಚನ, ಇ-ಬುಕ್, ಪುಟ-೩೯
4. ಬಸವರಾಜು ಎಲ್., ಅಲ್ಲಮ ವಚನ ಚಂದ್ರಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರೋಡ, ಬೆಂಗಳೂರು -೫೬೦೦೦೨, ಪುಟ-೯೭
5. ಬಸವರಾಜು ಎಲ್., ಅಲ್ಲಮ ವಚನ ಚಂದ್ರಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರೋಡ, ಬೆಂಗಳೂರು ೫೬೦೦೦೨, ಪುಟ-೧೨೪

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.